Reg No M 1229 42nd Year Sri "Satyavadi" Mysore 11—1—1958

ಸತ್ಯವಾದಿ

ದಿಡಿ ಪ್ರತಿ 3 ಪೈ | ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯರು

ಕಾಶ್ಮೀರ ವಿಷಯದಲ್ಲಿ ಷೇಕ್ ಅಬ್ದುಲ್ಲಾರವರ ನಿಲುವಿನಲ್ಲಿ ಬದಲಾವಣೆ ಇಲ್ಲ

ಕುಡ್ 10 — ಸರ್ಕಾರದ ಪ್ರವಾಸಿ ಭವನದಲ್ಲಿ ಕಾಶ್ಮೀರದ ಮಾಜಿ ಪ್ರಧಾನಿ ಷೇಕ್ ಅಬ್ದುಲ್ಲರವರು ಪತ್ರಿಕೆಯವರೊಡನೆ ಮಾತನಾಡುತ್ತಾ, ಕಾಶ್ಮೀರ ಬಗ್ಗೆ ತಮ್ಮ ನಿಲುವು ಬದಲಾಗದೆ ಉಳಿದಿದೆ ಮತ್ತು ಕಾಶ್ಮೀರ ಭವಿಷ್ಯ ಬಗ್ಗೆ ಜನಾಭಿಪ್ರಾಯದಂತೆ ನಡೆಯಬೇಕು ಎಂದರು ತಮ್ಮ ಮಾತನ್ನು ಮುಂದುವರಿಸುತ್ತಾ, ನನ್ನನ್ನು ನಿಮ್ಮ ಶತ್ರುವಾಗಿ ಪರಿಗಣಿಸಬೇಡಿ ಸ್ಥಾನಬದ್ಧತೆಗೆ ಮೊದಲಿನ ಷೇಕ್ ಅಬ್ದುಲ್ಲನೇ ನಾನು ಎಂದು ಅವರು ತಿಳಿಸಿದರು. ಮಹಾತ್ಮ ಗಾಂಧಿ ಋಣವು ತಮ್ಮ ನಾಯಕರು ಎಂದು ಅವರು ತಿಳಿಸಿದರು. ಪಂ|| ನೆಹರು ಮಹಾ ಪುರುಷರು ಆದರೆ ತಮ್ಮನ್ನು ಬಂಧನದಲ್ಲಿಡಲು ಅವರ ಬಲಾತ್ಕರಿಸಲ್ಪಟ್ಟರು ಎಂದರು.

ನಾಳೆ ಶ್ರೀನಗರಕ್ಕೆ ಆಗಮನ

ಷೇಕ್ ಅಬ್ದುಲ್ಲರನ್ನು ಬಂಬಲಿಸುವ ಕಾಶ್ಮೀರ ವಿಮೋಚನಾ ರಂಗದ ಪ್ರಕಟಣೆಯಂತೆ ಷೇಕ್ ಅಬ್ದುಲ್ಲರವರು ಭಾನುವಾರ ಶ್ರೀನಗರಕ್ಕೆ ಆಗಮಿಸುವ ನಿರೀಕ್ಷೆ ಇದೆ

ಸಾಕ್ಷ್ಯ ಚಿತ್ರ

ಮುಂಬೈ 10— ಭಾರತ ಸರಕಾರದ ವಾರ್ತಾ ಹಾಗೂ ಪ್ರಸಾರಮಂತ್ರಿ ಶಾಖೆಯ ಚಲನಚಿತ್ರ ವಿಭಾಗದವರು 'ಜೀವನದಲ್ಲಿ ಕಲಿತ ಒಂದು ಪಾಠ' ಎಂಬ ಸಾಕ್ಷ್ಯಚಿತ್ರವನ್ನು ತಯಾರಿಸಿರುವರು: ಈ ಸಾಕ್ಷ್ಯ ಚಿತ್ರವು ಮದ್ಯಪಾನದಿಂದ ಸಂಭವಿಸುವ ಕೆಡಕುಗಳಿಗೆ ಸಂಬಂಧಿಸಿರುವುದು.

ವಿದೇಶಗಳಿಗೆ ಕಾಫಿಯ ರಫ್ತು

ಬೆಂಗಳೂರು 10— ಕಾಫಿ ಬೋರ್ಡ್ ನವರು 1958-59 ರ ಬೆಳೆಯಲ್ಲಿ ಒಟ್ಟು 7903 ಟನ್ನುಗಳಷ್ಟು ಕಾಫಿಯನ್ನು ವಿದೇಶಗಳಿಗೆ ರಫ್ತಿಗಾಗಿ ಮೀಸಲಾಟ ಮಾಡಲು ನಿರ್ಧರಿಸಿರುವರು

ಮರುಭೂಮಿಯಲ್ಲಿ ಎಣ್ಣೆ

ಅಲ್ಜೀರ್ಸ್ 7— ಸಹಾರದ ಪ್ರಥಮ ಎಣ್ಣೆಯು 112 ಮೈಲಿ ಉದ್ದದ ಕೊಳವಿ ಮೂಲಕ ಮರುಭೂಮಿಯ ರೈಲ್ವೇ ಸ್ಥಳದಲ್ಲಿನ ಟ್ಯಾಂಕುಗಳಿಗೆ ಸುರಿಯುತ್ತಲಿದೆ

ಹಿಂದೂ ವ್ಯಾಪಾರಿಗಳ ದಸ್ತಗಿರಿ

ಅಗರ್ತಾಲ 8— ಪಶ್ಚಿಮ ಪಾಕಿ ಸ್ಥಾನದ ಅನೇಕ ವ್ಯಾಪಾರ ಕೇಂದ್ರಗಳಲ್ಲಿ ಹಿಂದೂ ವ್ಯಾಪಾರಿಗಳ ದಸ್ತಗಿರಿ ನಡೆಯುತ್ತಿದೆಯೆಂದು ವರದಿಯಾಗಿದೆ.

ವಿಮಾನ ಸ್ಥಾನ ರದ್ದು

ಲಹೋರ್ 10 — ಪ್ರಾಂತ ಸರಕಾರಿ ನೌಕರಿಗಳಲ್ಲಿ ಅಲ್ಪ ಸಂಖ್ಯಾತರಿಗೆ ವಿಮಾನ ಯಾನ ಮಾಡುವುದನ್ನು ತಪ್ಪಿಸುವ ನಿರ್ಧಾರವನ್ನು ಪಶ್ಚಿಮ ಪಾಕಿಸ್ತಾನ ಸರ್ಕಾರ ಕೈಗೊಂಡಿದೆ.

× ಹೈದರಾಬಾದು 9— ಭಾರತದ ಅಧಿಕೃತ ಭಾಷೆಯಾಗಿ ಹಿಂದಿಯನ್ನು 1980 ರ ಹೊತ್ತಿಗೆ ಮಾಡಬಹುದೆಂದು ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಸಂಜೀವರೆಡ್ಡಿ ಅಭಿಪ್ರಾಯ ವ್ಯಕ್ತ ಪಡಿಸಿರುವರು.

ಸಂಬಳ ಸಹಿತ ರಜಾ ದಿನವೆಂಬ ಆಶಯ

ಬೆಂಗಳೂರು 9— ಕಾ || 26 ಗಣರಾಜ್ಯ ದಿನೋತ್ಸವದಲ್ಲಿ ಕಾರ್ಮಿಕರು ಭಾಗವಹಿಸುವುದಕ್ಕಾಗಿ ಅನುಕೂಲವಾಗಲೆಂದು ಕೆಲೇಕ ಔದ್ಯೋಗಿಕ ಸಂಸ್ಥೆಗಳ ಆಡಳಿತ ಮಂಡಲಿಯವರು ಪ್ರತಿ ವರ್ಷ ಆ ದಿನ ಸಮೇತ್ತರಾಜ್ಯ ಕೊಡುತ್ತಿದ್ದರು ; ಈ ಸಾರಿಯೂ ಸಂಬಳ ಸಹಿತ ರಜದಿನವಾಗಲೆಂದು ಆಶಿಸಲಾಗಿದೆ.

ಸಮ್ಮೇಳನ ಕರೆವ ಘೋಷಣೆ

ಲಂಡನ್ 10 — ವಿಶ್ವ ಬಿಕ್ಕಟ್ಟಿನ ಪರಿಹಾರಕ್ಕೆ ನಿರ್ದಿಷ್ಟ ಸೂಚನೆಗಳನ್ನು ಕೊಡುವ ಪೂರ್ವಶೀಲನೆಗಾಗಿ ಸರ್ಕಾರದ ಮುಖ್ಯ ಅಧಿಕಾರಿಗಳ ಸಮ್ಮೇಳನವನ್ನು ಮುಂದಿನ 2 ಅಥವಾ 3 ತಿಂಗಳುಗಳಲ್ಲಿ ಸಮ್ಮೇಳನ ಕರೆಯಲು ನಿರ್ಧರಿಸಿರವದಾಗಿ ರಷ್ಯ ಘೋಷಿಸಿದೆ

ಸತ್ಕಾರಕೂಟ

ನವದೆಹಲಿ 0— ಭಾರತಾಧ್ಯಕ್ಷ ರಾಜೇಂದ್ರ ಪ್ರಸಾದರು ಬ್ರಿಟಿಷ್ ಪ್ರಧಾನಿ ಮೆಕ್ಮಿಲನರ ಗೌಂವಾರ್ಥವಾಗಿ ಒಂದು ಸತ್ಕಾರ ಕೂಟವೇರ್ಪಡಿಸಿದ್ದರು. ಉಪಾಹಾರಾನಂತರ ಮೆಕ್ಮಿಲರನ್ನು ಪಂ|| ನೆಹರೂರವರು ರಾಷ್ಟ್ರಪತಿ ಭವನದ ಮೊಗಲ್ ತೋಟದಲ್ಲಿ ಸಂಚರಿಸಿಸಿದರು.

ನವದೆಹಲಿ 9— ವೈಜಾಗ್ ನಗರದ ಬಡಬಡಕೇರಿ ಕೊಳಕು ಪ್ರದೇಶದಲ್ಲಿನ ಕೊಳಕನ್ನೆಲ್ಲಾ 262500 ರೂಗಳ ಖರ್ಚಿನಿಂದ ನಿರ್ಮೂಲಮಾಡಿ, ಅಲ್ಲಿ 210 ಗೃಹಸಾಲಗಳ ನಿವೇಶನವನ್ನು ಮಾಡಲು ಭಾರತ ಸರಕಾರವು ಕನ್ನಡ ಅನುಮತಿ ಇತ್ತಿದೆ.

ಬೆಂಬಲ ನೀಡಬೇಕೆಂಬ ಶಿಫಾರ್ಸು

ಪ್ಯಾರಿಸ್ 9— ಕಮ್ಯುನಿಸ್ಟೇತರ ಪ್ರಪಂಚದ ಮತ್ತು ಯೂರೋಪಿಗೆ ಬೆಂಬಲ ಮತ್ತು ರಕ್ಷಣೆಯನ್ನು ಸೋವಲಿನ್ ಪಾರ್ಟಿಗಳು ನೀಡಬೇಕೆಂದು ಅಂತರ ರಾಷ್ಟ್ರೀಯ ಸೋಷಲಿಸ್ಟರ ಫಾಯಂ ಸಬ್ ಕಮಿಟಿ ಶಿಫಾರಸು ಮಾಡಿದೆ.

ಟ್ರಸ್ಟಿನ ಉದ್ಘಾಟನೆ

ವಾರಣಾಸಿ 9— ಅಖಿಲ ಭಾರತ ಕಾಶೀರಾಜ ಟ್ರಸ್ಟನ್ನು ತಾ || 12 ರಂದು ಅಧ್ಯಕ್ಷ ರಾಜೇಂದ್ರ ಪ್ರಸಾದರು ಉದ್ಘಾಟಿಸುವರು ; ಟ್ರಸ್ಟಿನವರು ಪುರಾಣಗಳನ್ನು ಮುದ್ರಿಸುವರು ; ಟ್ರಸ್ಟಿಗೆ ರಾಜರು 5 ಲಕ್ಷ ರೂ ಸಹಾಯ ಮಾಡಿದ್ದಲ್ಲದೆ, ತಮ್ಮ ಮುದ್ರಣಾಲಯವನ್ನೂ ಕೊಟ್ಟಿರುವರು — ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಟ್ರಸ್ಟಿನವರು ಒಂದು ಯಾತ್ರಿಕರ ವಾರ್ತಾ ಕೇಂದ್ರವನ್ನೂ ಈಡೆಗೆ ಸ್ಥಾಪಿಸಿಸಿರುವರು.

ನಾಳೆಯ ಪಂಚಾಂಗ

ಅ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಪತ್ಕೃಷ್ಣ ಜೋಯಿಸರಿಂದ

12 ಭಾನುವಾರ ಸಪ್ತಮಿ ಹಸ್ತ ; ಸ್ವಾಮಿ ವಿವೇಕಾನಂದ ಜಯಂತಿ

ಬೆಂಗಳೂರು 10— ಅಂತರ ರಾಷ್ಟ್ರೀಯ ವ್ಯಾಜ್ಯಗಳ ವ್ಯವಸ್ಥೆಗೋಸ್ಕರ ಯುದ್ಧ ತ್ಯಜಿಸುವದಕ್ಕಾಗಿ ಘನವಾದ ಪಂಚಶೀಲ ತತ್ವ ಅಭ್ಯುದಯಗೊಳ್ಳಬೇಕು ಎಂದು ಜೆಕೊಸ್ಲೊವಿಯಾ ಪ್ರಧಾನಿ ವಿಲಿಯಂ ಸಿರೋಕಿ ಇಲ್ಲಿ ಘೋಷಿಸಿದರು.

ರಷ್ಯಾದಲ್ಲಿ ಸಂಚರಿಸಿ ಮಡಿದ ಭಾರತೀಯ ಬ್ರಾಹ್ಮಣ !

— ತೈಲಚಿತ್ರವೊಂದರ ಇತಿಹಾಸ —

ರಷ್ಯಾದ ರಾಜ್ಯಾರ್ಜ ಸಾಮ್ರಾಂತದಲ್ಲಿ ಓಕಾ ನದಿಯ ದಂಡೆಯ ಮೇಲೆ ಇರುವ ಒಂದು ಹಳೆಯ ಪಟ್ಟಣ ಕಾಸಿಮೋವ್ : ಆ ನಗರದ ಹೊರ ವಲಯಗಳಲ್ಲಿ ಸ್ಥಳೀಯ ವಿವಿಧ ವಸ್ತುಸಂಗ್ರಹಾಲಯವೊಂದಿದೆ ; ಅಲ್ಲಿರುವ ಅನೇಕ ಪ್ರದರ್ಶಿತ ವಸ್ತುಗಳಲ್ಲಿ ಹಳೆಯ ರೈತರ ಮನೆಯ ಸಾಮಾನುಗಳು, ಕಸೂತಿ ಹಾಕಿದ ಬಟ್ಟೆಗಳು, ಜಮೀನುದಾರರ ಮನೆಗಳ ಪೀಠೋಪಕರಣಗಳು, ಪುರಾತನ ಸಂಶೋಧಿತ ವಸ್ತುಗಳ , ಚಿತ್ರಗಳು, ಪ್ರಥಮ ಮುದ್ರಣದ ಪುಸ್ತಕಗಳು ಮತ್ತು ವಾರಂಡು ಲಿಪಿಗಳು ಮತ್ತು ಅನೇಕ ದಸ್ತೈವೇಜುಗಳು— ಇವುಗಳ ವಧ್ಯೆ ಈ ಸ್ಥಳಕ್ಕೆ ಅಸಾಧಾರಣವೆಂದೆನಿಸುವ ಒಂದು ಪ್ರದರ್ಶಿತ ವಸ್ತು ಎದ್ದು ಕಾಣುತ್ತದೆ

ಅದೊಂದು ದೊಡ್ಡ ತೈಲಚಿತ್ರ— ಸ್ಪಷ್ಟವಾದ ವ್ಯಕ್ತಿಚಿತ್ರಣ ; ಕೃಷ್ಣ ವರ್ಣದ, ಕಪ್ಪು ಕಣ್ಣುಗಳ, ಕಂದುಬಣ್ಣದ ಉಂಗುರ ಕೂದಲಿನ ಗಡ್ಡವುಳ್ಳ, ಮತ್ತು ಬಿಳಿಯ ರುಮಾಲನ್ನು ಧರಿಸಿದ ಮನುಷ್ಯನ ಚಿತ್ರವಿದು : ಆತನ ಸುಲಕ್ಷಣ ರೂಪವೂ, ಸ್ವಲ್ಪ ಗುಳಿಬಿದ್ದ ಕೆನ್ನೆಗಳೂ, ವಿವೇಕಯುತವಾದ ಮ್ಲಾನ ವದನವೂ ಅದರಲ್ಲಿ ಕಂಡುಬರುತ್ತವೆ ; ಯಾರೀತ ? ಅರಬನೇ ? ಪರ್ಷಿಯನನೇ ? ತುರ್ಕನೇ ? ಅಲ್ಲ : ಅದು ಸಾಧ್ಯವಿಲ್ಲವಾದರೂ ; ಚೆನ್ನಾಗಿ ಗಮನವಿತ್ತು ನೋಡಿದರೆ, ಈ ವ್ಯಕ್ತಿಯ ಹಣೆಯ ಮೇಲೆ ಒಂದು ನಾಮವನ್ನು ಕೂಡ ಕಂಡುಬರುತ್ತದೆ ; ಭಾರತೀಯನೆ ? ಬ್ರಾಹ್ಮಣನೇ ?

ಈ ಪಟ್ಟಣದಿಂದ ಏಳು ಕಿಲೋಮೀಟರುಗಳಷ್ಟು ದೂರದಲ್ಲಿರುವ ಇಸ್ಕೊಮಿನೋ ಹಳ್ಳಿಯಲ್ಲಿನ ಒಬ್ಬ ಶ್ರೀಮಂತನೊಬ್ಬನ ಮನೆಯಿಂದ ಈ ಚಿತ್ರವು ಕಾಸಿಮೋವ್ ನಗರದ ಸ್ಥಳೀಯ ವಸ್ತುಸಂಗ್ರಹಾಲಯಕ್ಕೆ ಬಂದಿತು ; ವಿಷ್ಣುವಕ್ಕೆ ಮೊದಲು ಇಸ್ಕೊಮಿನೋ ಹಳ್ಳಿಯು ' ಓಲೆನಿನ್ ' ವಂಶದ ಹಳೆಯ ಶ್ರೀಮಂತ ವ್ಯಕ್ತಿಯೊಬ್ಬಾತನ ವಶದಲ್ಲಿದ್ದಿತ್ತು.

ಈ ತೈಲಚಿತ್ರದ ಹಿಂದಿಯಲ್ಲಿನ ಮಾಸಲು ಒರಹವು ಈ ಪ್ರಶ್ನೆಗೆ ಉತ್ತರವನ್ನು ನೀಡುತ್ತದೆ : ಅದರಲ್ಲಿ ಹೀಗೆ ಬರೆದಿದೆ— ' ಭಾರತ ದೇಶದಿಂದ, ಮಾಲ್ವಾ ಪ್ರಾಂತದಲ್ಲಿಂದ, ಪೇಷ್ವೆಯಂ ಪ್ರದೇಶದಲ್ಲಿನ ಉದಯಾವುರಿಂದಿಂದ, 1816 ರಲ್ಲಿ ಸೆಂಟ್'ಪೀಟರ್'ಬರ್ಗ್ ನಗರಕ್ಕೆ ಬಂದ, ನಾಮ' ಯೋಗಿ ಅಲಕ್ ಎಂಬ ಹೆಸರಿನ ಭಾರತೀಯ ಬ್ರಾಹ್ಮಣನೊಬ್ಬಾತನ ತೈಲಚಿತ್ರ : 1818 ರ ಏಪ್ರಿಲ್ ದಿನಾಂಕ 29 ರಂದು ನನ್ನ ಮನೆಯಲ್ಲಿ ಆತನು ವಿಧಿವಶನಾದನು ; ಈ ತೈಲಚಿತ್ರವನ್ನು ಫ್ಯೋತ್ ಓಹನಿಕ್ ಚಿತ್ರಿಸಿದನು

ಈ ರೀತಿಯಾಗಿ 1816 ರಲ್ಲಿ ಉದಯಾವುರಿಂದಿಂದ ಸೆಂಟ್'ಪೀಟರ್'ಬರ್ಗಿಗೆ ಬಂದ ಭಾರತೀಯ ಬ್ರಾಹ್ಮಣ ನಾಮಯೋಗಿ ಅಲಕ್, ಸುಮಾರು ಎರಡು ವರ್ಷಗಳವರೆಗೆ ಓಲೆನಿನ್‌ರವರ ಮನೆಯಲ್ಲಿದ್ದನು.

ಆ ಮನೆಯ ಯಜಮಾನರೂ, ಘನ ಅಧಿಕಾರಿಯೂ, ಪ್ರಾಕ್ತನ ವಿಮರ್ಶಕರೂ, ಮತ್ತು ಕಲಾವಿದರೂ ಆಗಿದ್ದ ಅಲೆಕ್ಸೈ ಓಲೆನಿನ್‌ರವರು 1811 ರಿಂದ ಸಾಮ್ರಾಜ್ಯದ ಸಾರ್ವಜನಿಕ ಪುಸ್ತಕಾಲಯದ ನಿರ್ದೇಶಕರಾಗಿಯೂ ಮತ್ತು 1817 ರಿಂದ ಕಲಾ ಅಕಾಡೆಮಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು ; ' ಭಾರತೀಯ ಬ್ರಾಹ್ಮಣ ' ನ ಚಿತ್ರವನ್ನು ಅತನ ಮಗ ಫ್ಯೋತ್ ಚಿತ್ರಿಸಿದನು ನಾಮಯೋಗಿಯು ಯಾವುದಾದರೂ ಉದ್ದೇಶಕ್ಕಾಗಿ ರಷ್ಯನ್ ವಿಜ್ಞಾನಿಯ ಮನೆಗೆ ಬಂದಿದ್ದನೆ ? ನಮಗದು ತಿಳಿಯದು.

ವುಡ್‌ಲ್ಯಾಂಡ್ಸ್

10—1—58 ರಿಂದ

ಅಮೋಘ ಪ್ರಾರಂಭ

ದೇವಾನಂದ್ — ಕಲ್ಪನಾ ಕಾರ್ತಿಕ್

ಶಶಿಕಲಾ ವಾತ್ಸವಹಿಸಿರುವ

ನೌ ದೋ ಗ್ಯಾರ

Nau Do Gyara

ಅತ್ಯಮೋಘ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1–80

ಉಮಾ ಟಾಕೀಸ್

10—1—58 ರಿಂದ

ಗುಣಸುಂದರಿ

(ತಮಿಳು)

ನಟವರ್ಗ— ಸಾವಿತ್ರಿ, ಜಮಿನಿ ಗಣೇಶನ್

ಸಂಬಯಾಂ, ಕಂಗರಾವ್, ಕರುಣಾನಿಧಿ

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ

ಬೆಳಿಗಿನ ಪ್ರದರ್ಶನ 10–30 ಕ್ಕೆ

ಅಪರಾ— ವೈಭವ 4 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಜೀವಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪಶುಸಂಪತ್ತಿನ ಅಭಿವೃದ್ಧಿ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ 8 ಆಣೆ ಅಂಚೆವೆಚ್ಚ

ಬೆಂಬಲಿಗರು ರೂ 10 (ಒಂದೇಸಾರಿ) ಇವರಿಗೆ ಪತ್ರಿಕೆ ಸದಾ ಕೊಡಲಾಗುವುದು

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

ಗೋರಕ್ಷಣಾ ಕಾರ್ಯಕ್ಕೆ ಹೆಚ್ಚು ಪ್ರಚಾರ ನಡೆಯಲಿ

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

SHAKTI

SUDHA

A Superb Tonic

Edited, Printed& Published by Dharma Prachara Nursia M S Krishna Rao at the Satyavadi Press Chamrajpuram Mysore